**ಓ ಎಸ್ ನಂಃ16/2017**

**ಪಿ. ಡಬ್ಲ್ಯೂ ಃ 1**

**ದಿಃ 7.08.2023 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3 ರವರ ಪರ ಶ್ರೀ ಡಿ ಜಿ ಪಿ ವಕೀಲರಿಂದಃ**

ಸ.ನಂ. 165 ರಲ್ಲಿ 5 ಎಕರೆ 12 ಗುಂಟೆ ಜಮೀನಿದೆ. ಅದರಲ್ಲಿ 22 ಗುಂಟೆ ಖರಾಬು ಇದೆ ಎಂದರೆ ಸರಿ. ಈ ಸ್ವತ್ತು ಮೂಲತಃ ಡಿ ಆರ್ ಗುಂಡೂರಾವ್ pension ಶಿರಸ್ತೇದಾರ್ ಇವರಿಗೆ ಸೇರಿದ್ದು ಸ್ವತ್ತು ಎಂದರೆ ಸರಿ. ಗುಂಡೂರಾವ್ ಇವರಿಗೆ ಆ ಸ್ವತ್ತು ಅವರ ತಂದೆಯಿಂದ ಬಂದಿತ್ತು. ಅದು ದಿನಾಂಕಃ 24.03.1954 ರ ವಿಭಾಗಪತ್ರದ ಮೂಲಕ ಬಂದಿತ್ತು ಎಂದರೆ ಸರಿ. ನಾವು ಸ್ವತ್ತನ್ನು ಗುಂಡೂರಾವ್ ಇವರ ಮೂಲಕ ಕ್ರಯಕ್ಕೆ ತಗೆದುಕೊಂಡಿದ್ದೇವೆ. ಕ್ರಯಕ್ಕೆ ತೆಗೆದುಕೊಳ್ಳುವ ಕಾಲಕ್ಕೆ ಮೂಲ ದಾಖಲಾತಿಗಳನ್ನು ಪರಿಶೀಲಿಸಿದ್ದೇನೆ. ವಿಭಾಗಪತ್ರ, ಖಾತೆ ಮತ್ತು ಪಹಣಿಗಳನ್ನು ನೋಡಿ ಕ್ರಯಕ್ಕೆ ಪಡೆದಿದ್ದೇವೆ. ಅದರಲ್ಲಿ ನಮ್ಮ ಅಜ್ಜಿ ವೆಂಕಟಮ್ಮ ದಿನಾಂಕಃ 15.05.1964 ರಂದು 3 ಎಕರೆ 12 ಗುಂಟೆಯನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿ. ವಿಭಾಗಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ.

ನಾವು ಕ್ರಯಕ್ಕೆ ತೆಗೆದುಕೊಂಡ ಸ್ವತ್ತನ್ನು ಬಿಟ್ಟು ಸ.ನಂ. 165 ರಲ್ಲಿ ಉಳಿದ 2 ಎಕರೆ ಸ್ವತ್ತನ್ನು ಸರ್ಕಾರ ಭೂ ಸ್ವಾಧೀನ ಮಾಡಿಕೊಂಡಿದೆ ಎಂದರೆ ಸರಿಯಲ್ಲ. ಆ ಸ್ವತ್ತು ಮಲ್ಲನಪಾಳ್ಯದ ಗ್ರಾಮಸ್ಥರ ಅನುಕೂಲಕ್ಕಾಗಿ ಸರ್ಕಾರ ಬಳಸಿತ್ತು ಎಂದರೆ ಸರಿಯಲ್ಲ. ಅದರಲ್ಲಿ 1 ಎಕರೆ 36 ಗುಂಟೆಯನ್ನು ನಮ್ಮ ಅಜ್ಜಿ ಇದ್ದಾಗ ದಾಸಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ. ಅದರಲ್ಲಿ 8 ಗುಂಟೆ ಖರಾಬು ಇತ್ತು, ಅದನ್ನು ಸೇರಿಸಿ ಮಾರಾಟ ಮಾಡಿದ್ದಾರೆ. ಆ ಕ್ರಯಪತ್ರದ ಪ್ರತಿಯನ್ನು ನಾನು ಪಡೆದಿಲ್ಲ. ಆ ಕ್ರಯಪತ್ರದಲ್ಲಿ ಉಳಿಕೆ 2 ಎಕರೆ ಜಮೀನು ಭೂಸ್ವಾಧೀನವಾಗಿದೆ ಎಂದು ಬರೆದಿದೆ ಎಂದರೆ ಸರಿಯಲ್ಲ. ಉತ್ತರಕ್ಕೆ ನಮ್ಮದೇ ಉಳಿಕೆ ಜಮೀನು ಎಂದು ಆ ಪತ್ರದಲ್ಲಿ ಬರೆದಿದೆ ಎಂದು ಸಾಕ್ಷಿ ಹೇಳುತ್ತಾರೆ. ಆ ಕ್ರಯಪತ್ರದ ಪ್ರತಿಯನ್ನು ನಾನು ಪಡೆದು ಹಾಜರುಪಡಿಸಲು ಯಾವುದೆ ತೊಂದರೆ ಇಲ್ಲ.

ಗುಂಡೂರಾವ್ ಇವರು ಬಾಕಿ ಉಳಿದ 2 ಎಕರೆ ಸ್ವತ್ತನ್ನು ನಮಗೆ ಹಸ್ತಾಂತರ ಮಾಡಿದ ಬಗ್ಗೆ ಯಾವುದೆ ದಾಖಲೆ ಇಲ್ಲ ಆದರೆ ಕ್ರಯಪತ್ರದಲ್ಲಿ ಒಟ್ಟು ಜಮೀನಿನ ವಿಸ್ತೀರ್ಣ ಬರೆದಿದ್ದಾರೆ ಎಂದು

ಸಾಕ್ಷಿ ಹೇಳುತ್ತಾರೆ. ಆರ್ ಆರ್ ಟಿ ಪ್ರಕರಣದಲ್ಲಿ ತಹಶೀಲ್ದಾರ್ ಇವರು ನಿ ಪಿ 37 ರಂತೆ ಮಾಡಿದ್ದ ಆದೇಶ ತಪ್ಪು ಇದೆ ಎಂದು ನಿ ಪಿ 38 ರ ಪ್ರಕಾರ ಅದನ್ನು ತಿದ್ದುಪಡಿ ಮಾಡಿದ್ದಾರೆಂದು ಸರಿಯಲ್ಲ. ಅದನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಿ ಪಿ 40 ರಲ್ಲಿ ಇರುವ ಡಿಕ್ರಿ ದಾವಾ ಸ್ವತ್ತಿಗೆ ಸಂಬಂಧಪಟ್ಟ ಡಿಕ್ರಿ ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸಾರ್ವಜನಿಕ ಉಪಯೋಗಕ್ಕಾಗಿ ಬಿಟ್ಟು ಸ್ವತ್ತು ಮತ್ತು ಅದೇ ಉದ್ದೇಶಕ್ಕಾಗಿ ಆ ಸ್ವತ್ತನ್ನು ಸ್ವಾಧೀನಪಡಿಸಿಕೊಂಡಿದ್ದರಿಂದ ಅದರಲ್ಲಿ ನನಗೆ ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಗುಂಡೂರಾವ್ ಇವರು 3 ಎಕರೆ 12 ಗುಂಟೆ ಮಾತ್ರ ಮಾರಾಟ ಮಾಡಿದ್ದರಿಂದ ಉಳಿಕೆ ಸ್ವತ್ತು ಸರ್ಕಾರದ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾವು ಯಾವತ್ತೂ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರ್ ಕಚೇರಿಯಿಂದ ಕೊಟ್ಟ ಹಿಂಬರಹವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಾನು ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**